# ಕಾರ್ಮಿಕ ದಿನಾಚರಣೆಯ ಅಂಗವಾಗಿ



## ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ

## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಸಂಘಟನೆಗಳು

## ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಏರ್ಪಡಿಸಿರುವ

# ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಆರೋಗ್ಯದ ಬಗ್ಗೆ ಸಂವಾದ

ಆತ್ಮೀಯ ಕಾರ್ಮಿಕರೇ,

ಕಾರ್ಖಾನೆಗಳಲ್ಲಿ ಒಂದು ನಿಮಿಷವೂ ಬಿಡುವಿಲ್ಲದಂತೆ ಒತ್ತಡದಲ್ಲಿ ಕೆಲಸ ಮಾಡುತ್ತಿರುವ ನಮಗೆ ನಮ್ಮ ಆರೋಗ್ಯದತ್ತ ಗಮನವೇ ಇರುವುದಿಲ್ಲ. ಮನೆಗೆ ಬಂದರೆ ಮನೆಗೆಲಸದ ಜವಾಬ್ದಾರಿಯಲ್ಲಿ ನಮ್ಮ ಆರೋಗ್ಯವನ್ನು ನಿರ್ಲಕ್ಷಿಸುತ್ತೇವೆ. ಮಕ್ಕಳಿಗೆ, ಗಂಡನಿಗೆ ಆರೋಗ್ಯ ಸರಿಯಿಲ್ಲದಾಗ ಕೆಲಸಕ್ಕೆ ರಜೆ ಹಾಕಿ ಅವರನ್ನು ನೋಡಿಕೊಳ್ಳುತ್ತೇವೆಯೇ ಹೊರತು, ನಮಗೆ ಆರೋಗ್ಯ ಕೆಟ್ಟಾಗ ರಜೆ ಹಾಕಿ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ನಮ್ಮ ಕಾಯಿಲೆಗೆ ಚಿಕಿತ್ಸೆ ಮಾಡಿಕೊಳ್ಳುವುದಿಲ್ಲ.

ಪ್ರತಿದಿನವೂ ಕಾಲು ನೋವು, ಕಣ್ಣುನೋವು, ತಲೆನೋವು, ಬೆನ್ನು ನೋವುಗಳಿಂದ ಬಳಲುತ್ತಲೇ ಇರುತ್ತಿರುವ ನಾವು ಕೆಲವೊಮ್ಮೆ ಅಸ್ತಮಾ ಮತ್ತು ಗರ್ಭಕೋಶದ ತೊಂದರೆಗಳಂತಹ ಗಂಭೀರ ಕಾಯಿಲೆಗಳಿಗೂ ತುತ್ತಾಗಬಹುದು.

ನಮ್ಮ ಹಲವಾರು ಕಾಯಿಲೆಗಳನ್ನು ಸುಲಭವಾಗಿ ಕೈಗೆಟುಕುವ ಮನೆಮದ್ದುಗಳಿಂದ ವಾಸಿ ಮಾಡಿಕೊಳ್ಳಬಹುದು. ಕೆಲವು ಕಾಯಿಲೆಗಳು ಬರದಂತೆ ಮುನ್ನೆಚ್ಚರಿಕೆ ತೆಗೆದುಕೊಂಡರೆ ಸಾಕು. ಆದರೆ ಇವನ್ನು ನಮಗೆ ಹೇಳಿಕೊಡಲು ನಾವು ತಜ್ಞ ವೈದ್ಯರನ್ನು ಸಂಪರ್ಕಿಸಬೇಕಾಗುತ್ತದೆ. ಆದರೆ ಅವರು ಯಾರು? ಎಲ್ಲಿ ಸಿಗುತ್ತಾರೆ? ಎಂಬುದು ನಮಗೆ ತಿಳಿದಿರುವುದಿಲ್ಲ. ಕೆಲವೊಮ್ಮೆ ತಿಳಿದಿದ್ದರೂ ಅವರ ಬಳಿಗೆ ಹೋಗಲು ನಮಗೆ ಸಮಯ ಸಿಗುವುದಿಲ್ಲ. ಏಕೆಂದರೆ ನಮ್ಮ ಕಾಯಿಲೆಯನ್ನು ನಾವು ಯಾವತ್ತಿದ್ದರೂ ನಿರ್ಲಕ್ಷಿಸುವವರು ಅಲ್ಲವೇ?

ಸ್ನೇಹಿತರೇ, ನಿಮ್ಮ ಆರೋಗ್ಯವನ್ನು ನಿರ್ಲಕ್ಷಿಸಬೇಡಿ. ನಿಮ್ಮ ಆರೋಗ್ಯದ ಬಗ್ಗೆ ನೀವು ಗಮನ ಹರಿಸಲು ಇದೋ ಇಲ್ಲಿದೆ ಒಂದು ಸದವಕಾಶ!!

ದಿನಾಂಕ **12-4-2013** ರಂದು ನಾಡಿನ ಪ್ರಸಿದ್ಧ ವೈದ್ಯರುಗಳು ನಮ್ಮೊಂದಿಗಿರುತ್ತಾರೆ. **ಡಾ॥ ಎಚ್ ಎಸ್ ಅನುಪಮಾ** ಅವರು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ವೃತ್ತಿಪರ ಆರೋಗ್ಯ ಪರಿಸ್ಥಿತಿಯನ್ನು ಕುರಿತು ಮಾತನಾಡಲಿದ್ದಾರೆ. ನಾಡಿನ ಹೆಸರಾಂತ ವೈದ್ಯರಾದ **ಡಾ॥ ಲೀಲಾವತಿ ದೇವದಾಸ್** ಅವರು ಪ್ರಸೂತಿ ಮತ್ತು ಸ್ತ್ರೀ ರೋಗಗಳ ಬಗ್ಗೆ, ಹಾಗೂ **ಡಾ॥ ವಸುಂಧರಾ ಭೂಪತಿ**ಯವರು ಆರೋಗ್ಯದ ಸಮಸ್ಯೆಗಳಿಗೆ ಸುಲಭ ಮನೆಮದ್ದು ಪರಿಹಾರವನ್ನು ಸೂಚಿಸುತ್ತಾರೆ ಮತ್ತು ಕಾಯಿಲೆಗಳು ಬರದಂತೆ ತಡೆಗಟ್ಟಲು ಯಾವ ಮುನ್ನೆಚ್ಚರಿಕಾ ಕ್ರಮ ಅನುಸರಿಸಬೇಕೆಂದು ತಿಳಿಸಿಕೊಡಲಿದ್ದಾರೆ.

**ದಿನಾಂಕ: 12–5–2013, ಭಾನುವಾರ, ಸಮಯ: 9.30ಕ್ಕೆ, ಸ್ಥಳ: ನಾಟಕ ಚಾವಡಿ, ಕನ್ನಡ ಭವನ, ಜೆ.ಸಿ. ರಸ್ತೆ**

ದಯವಿಟ್ಟು ಈ ಸದವಕಾಶವನ್ನು ಸದ್ಬಳಕೆ ಮಾಡಿಕೊಳ್ಳಿ. . .. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ. . .

| ಕಾರ್ಯದರ್ಶಿಗಳು | ಪ್ರಧಾನ ಕಾರ್ಯದರ್ಶಿ | ಪ್ರಧಾನ ಕಾರ್ಯದರ್ಶಿ |
| --- | --- | --- |
| ಕರ್ನಾಟಕ ಲೇಖಕಿಯರ ಸಂಘ | GATWU | ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ |


ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ : ನಂ.376/H, ಗಣೇಶನ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ
ಮೈಸೂರು ರಸ್ತೆ, ಬೆಂಗಳೂರು–560 009, ಮೊಬೈಲ್ 9686229761, 9901290495

GATWU: ನಂ. 17/1, 1ನೇ ಮೊದಲ ಮಹಡಿ, ಬಿ.ಎಂ.ಟಿ.ಸಿ ಬಸ್ ಸ್ಟಾಪ್ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರುರಸ್ತೆ, ಬೆಂಗಳೂರು–26,
ಫೋ: 26745242, ಮೊಬೈಲ್:9844714476, 9880437877


Scanned with OKEN Scanner